# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 110 |
| ಸದಸ್ಯರ ಹೆಸರು | : | ಶ್ರೀ ಮಂಜನಾಥ್ ಭಂಡಾರಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 11.08.2025 |
| ಉತ್ತರಿಸುವವರು | : | ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದ ಎಷ್ಟು ಜಿಲ್ಲೆಗಳಲ್ಲಿ ಆನೆ ಹಾವಳಿಯಿಂದ ಕೃಷಿ ನಾಶ ಆಗುತ್ತಿರುವ ಕುರಿತು ಸರ್ಕಾರದ ಗಮನಕ್ಕೆ ಬಂದಿದೆ; (ವಿವರ ನೀಡುವುದು);</td><td>ರಾಜ್ಯದಲ್ಲಿ ಒಟ್ಟು 17 ಜಿಲ್ಲೆಗಳಲ್ಲಿ ಕಾಡಾನೆ ಹಾವಳಿಯಿಂದ ಕೃಷಿನಾಶ ಪ್ರಕರಣಗಳು ದಾಖಲಾಗಿರುತ್ತದೆ. ಕೃಷಿನಾಶ ಪ್ರಕರಣ ಹಾಗೂ ಪಾವತಿಸಲಾದ ಪರಿಹಾರ ಮೊತ್ತದ ಜಿಲ್ಲಾವಾರು ವಿವರವನ್ನು ಅನುಬಂಧ-01ರಲ್ಲಿ ಒದಗಿಸಿದೆ.</td></tr>
<tr><td>ಆ)</td><td>ದಕ್ಷಿಣ ಕನ್ನಡ ಜಿಲ್ಲೆಯ ರಕ್ಷಿತಾ ಅರಣ್ಯದ ಅಂಚಿನಲ್ಲಿರುವ ಗ್ರಾಮಗಳ ರೈತರು ಆನೆ ಹಾವಳಿಯಿಂದ ಕೃಷಿ ನಾಶ ಆಗುತ್ತಿರುವ ಬಗ್ಗೆ ಸಾಮಾಜಿಕ ಮಾಧ್ಯಮ ಮತ್ತು ಪತ್ರಿಕೆಗಳ ಮೂಲಕ ವರದಿಯಾಗಿರುವ ಪ್ರಕರಣಗಳಲ್ಲಿ ಸರ್ಕಾರದಿಂದ ಕೈಗೊಂಡ ಪರಿಹಾರ ಕ್ರಮಗಳೇನು:</td><td>ದಕ್ಷಿಣ ಕನ್ನಡ ಜಿಲ್ಲೆಯ ರಕ್ಷಿತಾ ಅರಣ್ಯದ ಅಂಚಿನಲ್ಲಿರುವ ಗ್ರಾಮಗಳಲ್ಲಿ ಆನೆ ಹಾವಳಿಯಿಂದ ಉಂಟಾದ ಕೃಷಿ ನಾಶ ಪ್ರಕರಣಗಳಿಗೆ ಕಳೆದ ಮೂರು ವರ್ಷಗಳಲ್ಲಿ ಪಾವತಿಸಲಾದ ಪರಿಹಾರಧನ ವಿವರ ಈ ಕೆಳಕಂಡಂತಿರುತ್ತದೆ.
<table>
<tr><th>ಕ್ರ. ಸಂ</th><th>ವರ್ಷ</th><th>ಫಲಾನುಭವಿಗಳ ಸಂಖ್ಯೆ</th><th>ಪರಿಹಾರ ನೀಡಿದ ಮೊತ್ತ (ರೂ.ಗಳಲ್ಲಿ)</th></tr>
<tr><td>1</td><td>2022-23</td><td>250</td><td>45,75,971/-</td></tr>
<tr><td>2</td><td>2023-24</td><td>266</td><td>71,27,078/-</td></tr>
<tr><td>3</td><td>2024-25</td><td>381</td><td>98,53,997/-</td></tr>
</table></td></tr>
<tr><td>ಇ)</td><td>ದಕ್ಷಿಣ ಕನ್ನಡ ಜಿಲ್ಲೆಯ ಯಾವ ತಾಲ್ಲೂಕಿನ ಯಾವ್ಯಾವ ಗ್ರಾಮಗಳಲ್ಲಿ ಆನೆ ಹಾವಳಿಯಿಂದ ಕೃಷಿ ನಾಶ ಆದ ಬಗ್ಗೆ ಸರಕಾರದ ಬಳಿ ವರದಿಗಳಿವೆ; ಆನೆ ದಾಳಿಯಿಂದ ಎಷ್ಟು ಜೀವಹಾನಿ ಮತ್ತು ಆಸ್ತಿ ಕೃಷಿ ಹಾನಿ ಪ್ರಕರಣಗಳಲ್ಲಿ ಇಲಾಖೆಯಿಂದ ಪರಿಹಾರ ಒದಗಿಸಲಾಗಿದೆ; ಇನ್ನುಳಿದ ಪ್ರಕರಣಗಳಲ್ಲಿ ಯಾವಾಗ,ಎಷ್ಟು ಪರಿಹಾರ ಮೊತ್ತ ನೀಡಲಾಗುವುದು;</td><td>ದಕ್ಷಿಣ ಕನ್ನಡ ಜಿಲ್ಲೆಯ ಈ ಕೆಳಕಂಡ ವಿವಿಧ ತಾಲೂಕಿನಲ್ಲಿ ಕಾಡಾನೆ ಹಾವಳಿಯಿಂದ ಕೃಷಿನಾಶವಾದ ಬಗ್ಗೆ ವರದಿಯಾಗಿರುತ್ತದೆ.
<table>
<tr><th>ಜಿಲ್ಲೆ</th><th>ತಾಲೂಕು</th><th>ಗ್ರಾಮ</th></tr>
<tr><td rowspan="4">ದಕ್ಷಿಣ. ಕನ್ನಡ. ಜಿಲ್ಲೆ</td><td>ಸುಳ್ಯ</td><td>ಮಂಡೆಕೋಲು, ಆಲೆಟ್ಟಿ, ಅಜ್ಜಾವರ, ಉಬರಡ್ಕ-ಮಿತ್ತೂರು, ಆರಂತೋಡು, ಸಂಪಾಜೆ, ಮರ್ಕಂಜ, ತೋಡಿಕಾನ, ದೇವಚಳ್ಳ, ನೆಲ್ಲೂರು -ಕೆಮ್ರಾಜೆ, ನಾಲ್ಕೂರು, ಹರಿಹರಪಲ್ಲತ್ತಡ್ಕ ಬಾಳುಗೋಡು, ಜಾಲ್ಸೂರು, ಕನಕಮಜಲು</td></tr>
<tr><td>ಕಡಬ</td><td>ಕೊಣಾಜೆ, ರೆಂಜಿಲಾಡಿ, ಐತ್ತೂರು, ಕೊಂಬಾರು, ಮಡಪ್ಪಾಡಿ, ಇಚ್ಲಂಪಾಡಿ, ನೂಜಿಬಾಳ್ತಿಲ, ಸುಬ್ರಹ್ಮಣ್ಯ, ಬಲ್ಯ , ನೆಲ್ಯಾಡಿ, ಕುಂತೂರು, ಶಿರಾಡಿ, ಕೌಕ್ರಾಡಿ, ಗೋಳಿತ್ತೊಟ್ಟು</td></tr>
<tr><td>ಬೆಳ್ತಂಗಡಿ</td><td>ಚಾರ್ಮಾಡಿ, ಧರ್ಮಸ್ಥಳ, ಚಿಬಿದ್ರೆ, ತೋಟತ್ತಾಡಿ, ಕಡಿರುದ್ಯಾವರ, ಮಲವಂತಿಗೆ, ನೆರಿಯ, ಶಿಬಾಜೆ, ರೆಖ್ಯಾ, ಹತ್ಯಡ್ಕ, ಕಳಂಜ, ನಿಡ್ಲೆ, ಶಿಶಿಲ, ಕೊಯ್ಯೂರು, ಪುದುವೆಟ್ಟು</td></tr>
<tr><td>ಪುತ್ತೂರು</td><td>ಕೊಳ್ತಿಗೆ, ಮಾಡ್ನೂರು, ಕೆಯ್ಯೂರು</td></tr>
</table></td></tr>
</table>

Blcd

<table>
<tr>
<td></td>
<td></td>
<td>
ಕಾಡಾನೆ ದಾಳಿಯಿಂದ ಉಂಟಾದ ಕೃಷಿ, ಆಸ್ತಿ ಮತ್ತು ಜೀವಹಾನಿ ಪ್ರಕರಣಗಳಿಗೆ ಸಂಬಂಧಿಸಿದಂತೆ ಪಾವತಿಸಲಾದ ವಿವರ ಈ ಕೆಳಕಂಡಂತಿರುತ್ತದೆ.
<table>
<tr><th>ಕ್ರ. ಸಂ.</th><th>ವರ್ಷ</th><th>ಕೃಷಿ/ ಆಸ್ತಿ ಹಾನಿಯಾದ ಫಲಾನುಭವಿಗಳ ಸಂಖ್ಯೆ</th><th>ಪರಿಹಾರ ನೀಡಿದ ಮೊತ್ತ (ರೂ.ಗಳಲ್ಲಿ)</th><th>ಜೀವ ಹಾನಿ ಯಾದ ಸಂಖ್ಯೆ</th><th>ಪರಿಹಾರ ನೀಡಿದ ಮೊತ್ತ (ರೂ.ಗಳಲ್ಲಿ)</th></tr>
<tr><td>1</td><td>2022-23</td><td>250</td><td>45,75,971/-</td><td>03</td><td>30,00,000/-</td></tr>
<tr><td>2</td><td>2023-24</td><td>266</td><td>71,27,078/-</td><td>01</td><td>15,00,000/-</td></tr>
<tr><td>3</td><td>2024-25</td><td>381</td><td>98,53,997/-</td><td>-</td><td>-</td></tr>
<tr><td>4</td><td>2025-26</td><td>109</td><td>31,79,122/-</td><td>02</td><td>20,00,000/-</td></tr>
</table>
2025-26ನೇ ಸಾಲಿನಲ್ಲಿ ಇದುವರೆವಿಗೂ 111 ಪ್ರಕರಣಗಳಿಗೆ ಸಂಬಂಧಿಸಿದಂತೆ ಪರಿಹಾರಧನ ರೂ.51,79,122.00 ಪಾವತಿಸಲು ಕ್ರಮಕೈಗೊಳ್ಳಲಾಗಿದೆ.<br><br>
ಮುಂದುವರೆದು, 111 ಪ್ರಕರಣಗಳಿಗೆ ಸಂಬಂಧಿಸಿದಂತೆ ರೂ. 45,93,327 ಪಾವತಿಸಲು ಕ್ರಮ ವಹಿಸಲಾಗುತ್ತಿದೆ.
</td>
</tr>
<tr>
<td>ಈ)</td>
<td>ತೀವ್ರ ಆನೆ ಹಾವಳಿಯಿರುವ ದಕ್ಷಿಣ ಕನ್ನಡ ಜಿಲ್ಲೆಯ ಪೂಮಲೆ ರಕ್ಷಿತಾರಣ್ಯದ ಸುತ್ತ ಇರುವ ಮರ್ಕಂಜ, ಉಬರಡ್ಕ, ನೆಲ್ಲೂರು ಕೇಮ್ರಾಜೆ, ಆರಂತೋಡು ಗ್ರಾಮಗಳಲ್ಲಿ ಆನೆ ಹಾವಳಿ ತಡೆಟ್ಟುವ ನಿಟ್ಟಿನಲ್ಲಿ ಆನೆಕಂದಕ, ಸೋಲಾರ್ ಫೆನ್ಸಿಂಗ್ , ನಿರ್ಮಿಸಿ ರೈತರ ಕೃಷಿ ಭೂಮಿಗೆ ರಕ್ಷಣೆ ನೀಡುವುದರ ಬಗ್ಗೆ ಅರಣ್ಯ ಇಲಾಖೆಗಳಗೊಂಡ ಕ್ರಮಗಳೇನು;</td>
<td>ಕಾಡಾನೆ ಹಾವಳಿಯಿರುವ ಪೂಮಲೆ ರಕ್ಷಿತಾರಣ್ಯದ ಸುತ್ತಮುತ್ತ ಗ್ರಾಮಗಳಲ್ಲಿ ಪ್ರಸಕ್ತ ಸಾಲಿನಲ್ಲಿ ಕ್ಷೇತ್ರದಲ್ಲಿನ ಅವಶ್ಯಕತೆಗೆ ಅನುಗುಣವಾಗಿ ಆನೆ ನಿರೋಧಕ ಕಂದಕ, ವಿಶೇಷ ವಿನ್ಯಾಸದ ಕಾಂಕ್ರೀಟೀಕರಣ. ಸೋಲಾರ್ ಫೆನ್ಸಿಂಗ್ ಮತ್ತು, ಸೋಲಾರ್ ಡಬ್ಬಲ್ ಲೈನ್ ಟೆಂಟಿಕಲ್ ಫೆನ್ಸಿಂಗ್ ನಿರ್ಮಾಣ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಕ್ರಮಕೈಗೊಳ್ಳಲಾಗುತ್ತಿದೆ.</td>
</tr>
<tr>
<td>ಉ)</td>
<td>ಅರಣ್ಯ ಪ್ರದೇಶದಲ್ಲಿ ಆನೆಗಳಿಗೆ ಅಗತ್ಯ ಆಹಾರ ಬೆಳಯುವ ಬಗ್ಗೆ ಮತ್ತು ಈ ಮೂಲಕ ಆನೆಗಳು ಆಹಾರಕ್ಕಾಗಿ ವಸತಿ ಪ್ರದೇಶಗಳಿಗೆ ದಾಳಿ ಮಾಡುವುದನ್ನು ತಡೆಯುವ ಬಗ್ಗೆ ಇಲಾಖೆ ಕೈಗೊಂಡ ಕ್ರಮಗಳೇನು;</td>
<td>ದಕ್ಷಿಣ ಕನ್ನಡ ಜಿಲ್ಲೆಯ ಅರಣ್ಯ ಪ್ರದೇಶಗಳಲ್ಲಿ ನೆಡುತೋಪು ಕಾಮಗಾರಿಗಳನ್ನು ನಿರ್ವಹಿಸುವ ಸಮಯದಲ್ಲಿ ಆನೆಗಳ ಆಹಾರದ ಅವಶ್ಯಕತೆಗನುಗುಣವಾಗಿ ಮಾವು, ಹಲಸು, ನೇರಳೆ, ಪುನರ್ಪುಳಿ ಮತ್ತು ಇತರೆ ಹಣ್ಣು ಬಿಡುವ ಜಾತಿಯ ಗಿಡಗಳನ್ನು ನೆಡಲು ಕ್ರಮಕೈಗೊಳ್ಳಲಾಗುತ್ತಿದೆ. ಅಲ್ಲದೇ ಕಾಡಾನೆಗಳು ಗ್ರಾಮಗಳಿಗೆ ಬಾರದಂತೆ ಈ ಕೆಳಗಿನ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.<br><br>
1. ಕಾಡಾನೆಗಳ ಹಾವಳಿ ಹೆಚ್ಚಾಗಿರುವ ಪ್ರದೇಶದಲ್ಲಿ ಜನ ಸಂಪರ್ಕ ಸಭೆಯನ್ನು ಕರೆದು ಜನರಲ್ಲಿ ಅರಿವು ಮೂಡಿಸಿ, ವನ್ಯಪ್ರಾಣಿಗಳ ಬಗ್ಗೆ ಜಾಗೃತಿ ಹಾಗೂ ಸಹಬಾಳ್ವೆ ಮೂಡಿಸುವ ಸಭೆ / ಕಾರ್ಯಾಗಾರ ಏರ್ಪಡಿಸಲಾಗುತ್ತಿದೆ.<br>
2. ಬೆಳೆ ಹಾನಿ ಪ್ರಕರಣಗಳಲ್ಲಿ ಕೂಡಲೇ ಸರಕಾರದ ಆದೇಶದ ಪ್ರಕಾರ ಪರಿಹಾರವನ್ನು ನೇರವಾಗಿ ಅವರ ಬ್ಯಾಂಕ್ ಖಾತೆಗೆ ಪಾವತಿಸಲಾಗುತ್ತಿದೆ.<br>
3. ರೈತರಿಗೆ ಸಬ್ಸಿಡಿ ದರದಲ್ಲಿ ಸೋಲಾರ್ ಬೇಲಿ ನಿರ್ಮಾಣ ಮಾಡಲು ಉತ್ತೇಜನ ನೀಡಲಾಗುತ್ತಿದೆ ಹಾಗೂ ಅರಣ್ಯದ</td>
</tr>
</table>

| | | |
|---|---|---|
| | | ಅಂಚಿನಲ್ಲಿ ಬರುವ ಖಾಸಗಿ ಜಮೀನುಗಳ ಸುತ್ತಾ ಸರಕಾರದ ವತಿಯಿಂದ ದೊರಕುವ ಶೇ. 50 ಸಬ್ಸಿಡಿಯನ್ನು ಬಳಸಿಕೊಂಡು ಸೌರಶಕ್ತಿ ಬೇಲಿಯನ್ನು ನಿರ್ಮಿಸಲಾಗುತ್ತಿದೆ.<br>4. ಅರಣ್ಯ ರಕ್ಷಣೆ ಕ್ಯಾಂಪಿನ ಸಿಬ್ಬಂದಿಗಳನ್ನು ಆನೆ ಹಾವಳಿ ಸಮಯದಲ್ಲಿ ತೊಡಗಿಸಿ ಕೊಳ್ಳಲಾಗುತ್ತಿದೆ.<br>5. ಆನೆ ನಿರೋಧಕ ಕಂದಕ ತೋಡುವುದು, ಹಳ್ಳ ತೊರೆಗಳು ಬರುವಲ್ಲಿ ವಿಶೇಷ ವಿನ್ಯಾಸದ ಕಾಂಕ್ರಿಟ್ ರಚನೆ ಮತ್ತುಸೋಲಾರ್ ಟೆಂಟಕಲ್ ಬೇಲಿಯನ್ನು ಮಾಡಲಾಗುತ್ತಿದೆ.<br>6. ಮಡಿಕೇರಿ ವಿಭಾಗದಿಂದ ಎಲಿಫೆಂಟ್ ಟ್ರಾಕರ್ಸ್‌ಗಳನ್ನು ಕರೆಸಿ ಹಾಗೆಯೇ, ನಾಗರಹೊಳೆ / ಮಡಿಕೇರಿ ವಿಭಾಗಗಳಿಂದ ನುರಿತ ಆನೆ ಕಾವಡಿಗಳನ್ನು ಮತ್ತು ವೈದ್ಯರನ್ನು ಕರೆಯಿಸಿ ಊರಿಗೆ ಬಂದ ಕಾಡಾನೆಯನ್ನು ಕಾಡಿಗೆ ಹಿಮ್ಮೆಟ್ಟಿಸಿರುವ ಹಾಗೂ ಸೆರೆಹಿಡಿಯುವ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ.<br>7. ಆನೆ ಸಂಚರಿಸುವ ಪ್ರದೇಶಗಳಲ್ಲಿ ಸೂಚನಾ ಫಲಕವನ್ನು ಅಳವಡಿಸಲಾಗುತ್ತಿದೆ.<br>8. ಇಲಾಖಾ ಸಿಬ್ಬಂದಿಗಳಿಂದ ನಿರಂತರವಾಗಿ ಗಸ್ತು ಸಂಚರಿಸಿ ಕಾಡಾನೆಯು ಗ್ರಾಮಗಳಿಗೆ ದಾಳಿ ಮಾಡಿದಾಗ ಮರಳಿ ಅರಣ್ಯಕ್ಕೆ ಹಿಮ್ಮೆಟ್ಟಿಸುವ ಕಾರ್ಯವನ್ನು ಕ್ರಮಕೈಗೊಳ್ಳಲಾಗುತ್ತಿದೆ.<br>9. ಕಾಡಾನೆ ಹಾವಳಿ ಇರುವ ಗ್ರಾಮಗಳಲ್ಲಿ ಸ್ಥಳೀಯ ಗ್ರಾಮಸ್ಥರ, ಅಧಿಕಾರಿಗಳ ಸಿಬ್ಬಂದಿಗಳ ವಾಟ್ಸಪ್ ಗ್ರೂಪ್ ರಚಿಸಿ, ಆನೆ ಹಾವಳಿ ಬಗ್ಗೆ ಸಂದೇಶವನ್ನು ಸ್ಥಳೀಯರಿಗೆ ರವಾನಿಸಲು ಕ್ರಮಕೈಗೊಳ್ಳಲಾಗಿದೆ. |

**ಸಂಖ್ಯೆ: ಅಪಜೀ 163 ಎಫ್‌ಡಬ್ಲ್ಯೂಎಲ್ 2025**

**(ಈಶ್ವರ ಬಿ. ಖಂಡ್ರೆ)**
ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು

# ಅನುಬಂಧ-01

## ರಾಜ್ಯದಲ್ಲಿ ಕಾಡಾನೆ ದಾಳಿಯಿಂದ ಕೃಷಿನಾಶವಾದ ಪ್ರಕರಣಗಳ ಮಾಹಿತಿ

| ಕ್ರ. ಸಂ | ಜಿಲ್ಲೆ | 2022-2023 | | 2023-2024 | | 2024-2025 | |
|---|---|---|---|---|---|---|---|
| | | ಒಟ್ಟು ಪ್ರಕರಣಗಳ ಸಂಖ್ಯೆ | ಪಾವತಿಸಲಾದ ಮೊತ್ತ | ಒಟ್ಟು ಪ್ರಕರಣಗಳ ಸಂಖ್ಯೆ | ಪಾವತಿಸಲಾದ ಮೊತ್ತ | ಒಟ್ಟು ಪ್ರಕರಣಗಳ ಸಂಖ್ಯೆ | ಪಾವತಿಸಲಾದ ಮೊತ್ತ |
| 1 | ಉತ್ತರ ಕನ್ನಡ ಜಿಲ್ಲೆ | 284 | 28,07,774.00 | 246 | 27,23,835.00 | 436 | 47,80,875.00 |
| 2 | ಉಡುಪಿ | 0 | - | 4 | 82,500.00 | 16 | 2,27,620.00 |
| 3 | ಕೊಡಗು | 5838 | 3,91,27,292.00 | 8227 | 5,92,57,285.00 | 4582 | 4,39,30,908.00 |
| 4 | ಕೋಲಾರ | 284 | 24,99,000.00 | 120 | 12,81,000.00 | 43 | 3,64,000.00 |
| 5 | ಚಾಮರಾಜನಗರ | 2459 | 1,53,93,085.00 | 3407 | 2,95,32,693.00 | 3365 | 2,58,72,193.00 |
| 6 | ಚಿಕ್ಕಮಗಳೂರು | 1627 | 2,21,95,589.00 | 1456 | 2,46,62,345.00 | 1924 | 3,32,08,040.00 |
| 7 | ದಕ್ಷಿಣ ಕನ್ನಡ ಜಿಲ್ಲೆ | 250 | 45,75,971.00 | 266 | 71,27,078.00 | 381 | 98,53,997.00 |
| 8 | ದಾವಣಗೆರೆ | 127 | 11,98,537.00 | 84 | 9,35,880.00 | 199 | 32,52,729.00 |
| 9 | ಧಾರವಾಡ | 332 | 29,55,748.00 | 29 | 2,43,084.00 | 6 | 24,292.00 |
| 10 | ಬೆಂಗಳೂರು ದಕ್ಷಿಣ ಜಿಲ್ಲೆ | 8295 | 4,72,90,255.00 | 9011 | 7,70,30,535.00 | 9269 | 5,78,37,938.00 |
| 11 | ಬೆಂಗಳೂರು ನಗರ | 198 | 13,79,656.00 | 163 | 1,01,45,384.00 | 76 | 5,43,156.00 |
| 12 | ಬೆಳಗಾವಿ | 202 | 17,09,332.00 | 379 | 38,96,576.00 | 482 | 54,99,356.00 |
| 13 | ಮಂಡ್ಯ | 835 | 49,13,277.00 | 906 | 80,05,476.00 | 375 | 39,98,654.00 |
| 14 | ಮೈಸೂರು | 3815 | 1,86,95,908.00 | 3511 | 2,37,15,241.00 | 3261 | 2,31,93,116.00 |
| 15 | ಶಿವಮೊಗ್ಗ | 303 | 27,26,573.00 | 185 | 29,00,390.00 | 387 | 49,77,075.00 |
| 16 | ಹಾವೇರಿ | 25 | 1,86,641.00 | 73 | 11,41,832.00 | 26 | 2,83,576.00 |
| 17 | ಹಾಸನ | 4285 | 2,97,38,199.00 | 3641 | 4,07,82,804.00 | 3015 | 3,80,30,188.00 |
| ಒಟ್ಟು | | **29159** | **19,73,92,837.00** | **31708** | **29,34,63,938.00** | **27843** | **25,58,77,713.00** |

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ವನ್ಯಜೀವಿ)
ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು
ಕರ್ನಾಟಕ, ಬೆಂಗಳೂರು